

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಭಾವೈಕ್ಯ ಮತ್ತು ಧಾರ್ಮಿಕ ಸಾಮರಸ್ಯ

ಕಳೆದ ವಾರ ದೂರದ ಲಂಡನ್‌ನಿಂದ ಆಂಗ್ಲಿಕನ್ ಕ್ರೈಸ್ತರ ಧರ್ಮಗುರುಗಳಾದ Archbishop of Canterbury ಬೆಂಗಳೂರಿಗೆ ಬಂದಿದ್ದರು. ವೈಟ್‌ಫೀಲ್ಡ್ ನಲ್ಲಿರುವ ಕ್ರೈಸ್ತಧರ್ಮಸಂಸ್ಥೆಯ ಆಶ್ರಯದಲ್ಲಿ "ಹಿಂದೂ-ಕ್ರೈಸ್ತ ಧರ್ಮಸಂವಾದ" (Hindu-Christian dialogue) ಏರ್ಪಾಡಾಗಿತ್ತು. ಇದುವರೆಗೆ ಪಾಶ್ಚಾತ್ಯರಾಷ್ಟ್ರಗಳಲ್ಲಿ ಕ್ರೈಸ್ತಧರ್ಮದಲ್ಲಿರುವ ವಿಭಿನ್ನ ಪಂಥಗಳ ಮಧ್ಯೆ ಏರ್ಪಡಿಸುತ್ತಾ ಬಂದಿರುವ ಈ ಧರ್ಮಸಂವಾದವನ್ನು ಇತ್ತೀಚೆಗೆ ಇತರ ಧರ್ಮಗಳಿಗೂ ವಿಸ್ತರಿಸಲಾಗಿದೆ. ವಿವಿಧ ಧಾರ್ಮಿಕ ಗುಂಪುಗಳ ಮಧ್ಯೆ ನಡೆಯುತ್ತಿರುವ ವಿರಸಗಳ ಹಿನ್ನೆಲೆಯಲ್ಲಿ ಧಾರ್ಮಿಕ ಸಾಮರಸ್ಯವನ್ನು ಮೂಡಿಸಲು ಭಾವೈಕ್ಯತೆಯು ಒಂದು ಮಾರ್ಗವೆಂದು ನಂಬಲಾಗಿದೆ. ಅಂದರೆ ಕೋಮು ಸಂಘರ್ಷಕ್ಕೆ ಭಾವೈಕ್ಯತೆಯ ಕೊರತೆಯೇ ಕಾರಣವೆಂದು ಇದರ ಅರ್ಥ. ಹಾಗಿದ್ದಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ: "ಭಾವೈಕ್ಯತೆಯ ಅಭಾವಕ್ಕೆ ಕಾರಣಗಳೇನು?" ಭಾವೈಕ್ಯತೆಗೆ ಅಡ್ಡಿಯಾಗುವ ಸಮಸ್ಯೆಗಳ ಪರಿಹಾರವನ್ನು ನಾವು ಕಂಡುಕೊಳ್ಳದ ಹೊರತು ಧಾರ್ಮಿಕ ಸಾಮರಸ್ಯವನ್ನು ಸಾಧಿಸುವುದು ಸಾಧ್ಯವಿಲ್ಲ. ಈ ಪರಿಸ್ಥಿತಿ ಹೇಗಿದೆಯೆಂದರೆ, ಇದಕ್ಕೆ ಕನ್ನಡದ ಗಾದೆಯೊಂದನ್ನು ಉದಾಹರಿಸಬಹುದಾಗಿದೆ. "ಹುಚ್ಚು ಬಿಡದ ಹೊರತು ಮದುವೆ ಆಗುವ ಹಾಗಿಲ್ಲ; ಮದುವೆ ಆಗದ ಹೊರತು ಹುಚ್ಚು ಬಿಡೋ ಹಾಗಿಲ್ಲ". ಹುಡುಗನೇನೋ ಉನ್ನತ ವಿದ್ಯಾಭ್ಯಾಸ ಮಾಡಿದ್ದಾನೆ, ಸ್ಫುರದ್ರೂಪಿಯೂ ಆಗಿದ್ದಾನೆ. ಆದರೇನು ಮಾಡುವುದು? ಹುಚ್ಚು ಹಿಡಿದ ಅವನನ್ನು ಯಾವ ಹುಡುಗಿಯೂ ಮದುವೆಯಾಗಲು ಒಪ್ಪುವಂತಿಲ್ಲ. ಆ ಹುಡುಗನಿಗೆ ಮದುವೆ ಆಗದ ಹೊರತು ಹುಚ್ಚು ಬಿಡುವಂತಿಲ್ಲ! ಇದೇ ರೀತಿ, ಭಾವೈಕ್ಯತೆ ಸಾಧಿಸದ ಹೊರತು ಧಾರ್ಮಿಕ ಸಾಮರಸ್ಯ ಸಾಧ್ಯವಿಲ್ಲ, ಧಾರ್ಮಿಕ ಸಾಮರಸ್ಯ ಇಲ್ಲದಿದ್ದರೆ ಭಾವೈಕ್ಯತೆ ಸಾಧ್ಯವಿಲ್ಲ. ಸಮಕಾಲೀನ ಬದುಕಿನಲ್ಲಿ ಭಾವೈಕ್ಯತೆಗೆ ದೊಡ್ಡ ಅಡ್ಡಿಯೆಂದರೆ ಧರ್ಮಗಳೇ ಎನ್ನುವಂತಾಗಿದೆ.

ಒಂದು ಧರ್ಮದ ಜನರು ಒಟ್ಟಿಗೆ ಕುಳಿತು ಖಾಸಗಿಯಾಗಿ ಕೆಲವೊಂದು ವಿಷಯಗಳನ್ನು ಮಾತನಾಡುವಾಗ ಅನ್ಯ ಧರ್ಮೀಯನೊಬ್ಬ ಬಂದರೆ ಮಾತುಗಳನ್ನು ಮಧ್ಯದಲ್ಲಿಯೇ ನಿಲ್ಲಿಸಿಬಿಡುತ್ತಾರೆ, ಇಲ್ಲವೇ ವಿಷಯಾಂತರ ಮಾಡುತ್ತಾರೆ. ಹಠಾತ್ತನೆ ಬಂದ ಬೇರೊಂದು ಧರ್ಮದ ವ್ಯಕ್ತಿಯ ಎದುರಿನಲ್ಲಿ ಮಾತನ್ನು ಮುಂದುವರಿಸಲು ಮುಜುಗರಪಟ್ಟುಕೊಳ್ಳುತ್ತಾರೆ. ಸ್ವಧರ್ಮದ ಮನುಷ್ಯನ ಜತೆ ಮಾತನಾಡುವ ವಿಷಯಗಳನ್ನು ಅನ್ಯ ಧರ್ಮದ ವ್ಯಕ್ತಿ, ಆತ ಎಷ್ಟೇ ಆತ್ಮೀಯ ಗೆಳೆಯನಾಗಿದ್ದರೂ ಸಹ ಅವನ ಉಪಸ್ಥಿತಿಯಲ್ಲಿ ಹಂಚಿಕೊಳ್ಳಲು ಇಷ್ಟಪಡುವುದಿಲ್ಲ. ಸ್ನೇಹವಿಶ್ವಾಸಗಳಲ್ಲಿಯೂ ಹೀಗೆ ಧರ್ಮಗಳು ಕುತ್ತಾಗುವುದಾದರೆ ಧಾರ್ಮಿಕ ಸಾಮರಸ್ಯವನ್ನು ಸಾಧಿಸುವ ಪರಿ ಎಂತು? ಹಾಗಾದರೆ ದೋಷವಿರುವುದು ಧರ್ಮದಲ್ಲಿಯೇ ಅಥವಾ ನಮ್ಮ ನಡವಳಿಕೆಯಲ್ಲಿಯೇ? ಹಿಂದೂ, ಕ್ರೈಸ್ತ, ಮುಸ್ಲಿಂ ಇತ್ಯಾದಿ ಯಾವ ಧರ್ಮಗಳಲ್ಲಿಯೂ ತಾತ್ವಿಕವಾಗಿ ಯಾವುದೇ ದೋಷವಿಲ್ಲ, ದೋಷವಿರುವುದೆಲ್ಲಾ ಆಯಾಯ ಧಮತತ್ವಗಳನ್ನು ಸರಿಯಾದ ರೀತಿಯಲ್ಲಿ ಅನುಸರಿಸದೆ ಇರುವ ಅವುಗಳ ಅನುಯಾಯಿಗಳಲ್ಲಿ. "When two philosophers and theologians meet, they argue. When two spiritual practitioners and mystics meet, they smile" (ಇಬ್ಬರು ತತ್ವಜ್ಞಾನಿಗಳು ಮತ್ತು ವೇದಾಂತಿಗಳು ಭೇಟಿಯಾದರೆ ವಾದಕ್ಕೆ ಇಳಿಯುತ್ತಾರೆ; ಇಬ್ಬರು ಅನುಭಾವಿಗಳು ಅಥವಾ ಅವಧೂತರು ಭೇಟಿಯಾದರೆ ಪರಸ್ಪರ ಮುಗುಳ್ನಗುತ್ತಾರೆ) ಎಂಬ ಮಾತು ಇಲ್ಲಿ ಸ್ಮರಣೀಯ.

ವ್ಯಕ್ತಿ ಮತ್ತು ಆತ ಬದುಕುವ ಸಮಾಜದಲ್ಲಿ ಧರ್ಮ, ಭಾಷೆ, ಪ್ರಾಂತ್ಯ-ಪ್ರದೇಶಗಳು ಗಾಢವಾದ ಪ್ರಭಾವವನ್ನು ಬೀರುತ್ತವೆ. ನಮ್ಮ ಆಲೋಚನೆಗಳು ಮತ್ತು ನಮ್ಮ ನಡವಳಿಕೆಗಳು ಜೊತೆಯಾಗಿ ಬದುಕುವ ಜನರೊಂದಿಗಿನ ನಮ್ಮ ಸಂಬಂಧಗಳ ಮೇಲೆ ಪ್ರಭಾವವನ್ನು ಬೀರುತ್ತವೆ. ನಾವು ಆಚರಿಸುವ ಧರ್ಮದೊಂದಿಗೆ, ನಾವು ಬದುಕುವ ನೆಲದೊಂದಿಗೆ, ನಾವಾಡುವ ಭಾಷೆಯೊಂದಿಗೆ ನಮ್ಮನ್ನು ನಾವು ಗುರುತಿಸಿಕೊಳ್ಳುವುದು ಸಹಜ. ಯೂರೋಪ್ ಖಂಡದಲ್ಲಿರುವ ಆಸ್ಟ್ರಿಯಾ ದೇಶದ ಮೂಲೆಯ ಹಳ್ಳಿಯೊಂದರ ನಿವಾಸಿಯೊಬ್ಬ ತಾನು ವಾಸಿಸುವ ಹಳ್ಳಿ ಜಗತ್ತಿನ ಅತ್ಯಂತ ಶ್ರೇಷ್ಠ ತಾಣ ಎಂದು ಬೀಗುತ್ತಾ ಹೀಗೊಂದು ಜರ್ಮನ್ ಜನಪದ ಗೀತೆ ಹಾಡುತ್ತಾನೆ:

Wohl is die Welt so gross und weit
Und alle sonnen Schein!
Das alle schoenste Stueck davon
Ist wohl die Heimat mein!

**ವಿಶಾಲವಾದೀ ವಿಶ್ವದಲಿ**
**ಹೊಳೆಯುವ ಸೂರ್ಯನ ಕಿರಣದಲಿ**
**ಆ ದೇವರ ಸೃಷ್ಟಿಯ ಮಾಟದಲಿ**
**ಸುಂದರ ವಸ್ತುವು ಆವುದೆ ಇದ್ದರೆ**
**ಇರುವುದು ನನ್ನೀ ನಾಡಿನಲಿ!**

ಕನ್ನಡಿಗರಾದ ನಾವು ಪ್ರಖ್ಯಾತ ಕವಿ ಕುವೆಂಪು ಅವರ ಈ ಗೀತೆಯನ್ನು ಹಾಡಿ ಹೆಮ್ಮೆಪಟ್ಟುಕೊಳ್ಳುತ್ತೇವೆ:

**ಕನ್ನಡ ಎನೆ ಕುಣಿದಾಡುವುದೆನ್ನೆದೆ**
**ಕನ್ನಡ ಎನೆ ಕಿವಿ ನಿಮಿರುವುದು!**

ಈ ಪದ್ಯಗಳಲ್ಲಿ ತುಂಬಿರುವ ಭಾವತೀವ್ರತೆಯನ್ನು ಜಗತ್ತಿನ ಜನರೆಲ್ಲರೂ ಅನುಭವಿಸಲು ಸಾಧ್ಯ. ನಮ್ಮ ಭಾಷೆ ಕನ್ನಡವಾಗಿರಲಿ, ತಮಿಳಾಗಿರಲಿ, ತೆಲುಗಾಗಿರಲಿ, ಹಿಂದಿಯಾಗಿರಲಿ ಈ ಗೀತೆಗಳನ್ನು ಕೇಳಿದ ಕೂಡಲೇ ನಮ್ಮ ನೆನಪಿನ ಸುರುಳಿ ಬಿಚ್ಚಿಕೊಳ್ಳುತ್ತದೆ; ಗತಕಾಲದ ಅನುಭವಗಳು ನಮ್ಮ ಸ್ಮೃತಿಪಟಲದ ಮೇಲೆ ಮೂಡುತ್ತವೆ. ಬೇರೊಂದು ಧರ್ಮ, ನಾಡು-ನುಡಿಗಳ ಬಗ್ಗೆ ದ್ವೇಷವನ್ನು ಬೆಳೆಸಿಕೊಳ್ಳದೆ ನಮ್ಮ ನಮ್ಮ ಧರ್ಮ, ನಾಡು-ನುಡಿಗಳನ್ನು ಪ್ರೀತಿಸುವುದರಲ್ಲಿ, ಹೆಮ್ಮೆಪಟ್ಟುಕೊಳ್ಳುವುದರಲ್ಲಿ ತಪ್ಪೇನೂ ಅಲ್ಲ. ಆದರೆ ನಿಜ ಜೀವನದಲ್ಲಿ ಅದು ಉಂಟುಮಾಡುತ್ತಿರುವ ಪರಿಣಾಮವೇ ಬೇರೆ. ನಮ್ಮ ಧರ್ಮಕ್ಕೆ ಸೇರಿದವನೊಬ್ಬ ಎಷ್ಟೇ ದೂರದಲ್ಲಿದ್ದರೂ, ನಮ್ಮ ಜೀವಮಾನದಲ್ಲಿ ಎಂದೂ ಅವನನ್ನು ನೋಡಿರದಿದ್ದರೂ, ತೀರಾ ಅಪರಿಚಿತನಾಗಿದ್ದರೂ ಅವನ ಬಗ್ಗೆ ನಾವು ನಮ್ಮ ಧರ್ಮದವನಾಗಿರದ, ನಮ್ಮ ಭಾಷೆಯವನಾಗಿರದ ನಮ್ಮ ಪಕ್ಕದ ಮನೆಯವನಿಗೆ ತೋರುವುದಕ್ಕಿಂತ ಹೆಚ್ಚು ಕಾಳಜಿಯನ್ನು ತೋರಿಸುತ್ತೇವೆ.

ವಾಸ್ತವವಾಗಿ ಎಲ್ಲ ಧರ್ಮಗಳೂ ಮನುಕುಲವನ್ನು ಪ್ರೀತಿಸುವುದನ್ನೇ ಬೋಧಿಸುತ್ತವೆ; ನಮ್ಮ ಮನಸ್ಸನ್ನು ಪಳಗಿಸಿ ನಮ್ಮೊಳಗಿನ ದೈವಶಕ್ತಿಯ ಸಾಕ್ಷಾತ್ಕಾರಕ್ಕೆ ಅನುವು ಮಾಡಿಕೊಡುತ್ತವೆ. ಆದರೆ ದಿನಬೆಳಗಾದರೆ ನಾವಿಂದು ಮುಗ್ಧಜನರ ಮಾರಣಹೋಮವನ್ನು ಜಗತ್ತಿನೆಲ್ಲೆಡೆ ಕಾಣುತ್ತಿದ್ದೇವೆ. ರಷ್ಯಾದ ಶಾಲೆಯೊಂದರಲ್ಲಿ ಬಹಳ ವರ್ಷಗಳ ಹಿಂದೆ ನೂರಾರು ಶಾಲಾ ಮಕ್ಕಳು ಮತ್ತು ಉಪಾಧ್ಯಾಯರ ಮೇಲೆ ನಡೆಸಿದ ಅಮಾನವೀಯ ಧಾಳಿ ಹಾಗೂ ಕಗ್ಗೊಲೆ ಇದಕ್ಕೊಂದು ನಿದರ್ಶನವಾಗಿದೆ. ನಮ್ಮ ಧರ್ಮ, ನಮ್ಮ ದೇಶ ಹಾಗೂ ನಮ್ಮ ಭಾಷೆಯ ಮೇಲಿನ ಪ್ರೇಮವು ಬೇರೆ ಧರ್ಮ, ಬೇರೆ ದೇಶ ಮತ್ತು ಬೇರೆ ಭಾಷೆಯ ಜನರ ಬಗ್ಗೆ ಇಂಥ ದ್ವೇಷವನ್ನು ಹುಟ್ಟು ಹಾಕುವುದಾದರೆ "ಧರ್ಮದ ಪ್ರಯೋಜವಾದರೂ ಏನು?" ಎಂಬ ಪ್ರಶ್ನೆ ಏಳುತ್ತದೆ. "Politics is a short term religion and religion is a long term politics" (ರಾಜಕೀಯವು ಅಲ್ಪಾವಧಿಯ ಧರ್ಮ, ಧರ್ಮವು ದೀರ್ಘಾವಧಿಯ ರಾಜಕೀಯ) ಎನ್ನುತ್ತಾರೆ ಡಾ. ರಾಮ್ ಮನೋಹರ ಲೋಹಿಯಾ. ಅವರ ಈ ಮಾತಿನಲ್ಲಿ ಆಶ್ಚರ್ಯಪಡುವಂತಹದೇನೂ ಇಲ್ಲ. Politics without princples is a sin (ತತ್ವರಹಿತ ರಾಜಕಾರಣ ಒಂದು ಪಾಪ) ಎಂದಿದ್ದರು ಗಾಂಧೀಜಿ. ಧರ್ಮಗಳನ್ನು ದುರ್ಬಳಕೆ ಮಾಡಿಕೊಂಡು ರಾಜಕಾರಣಿಗಳು ಅಧಿಕಾರವನ್ನು ಹಿಡಿಯಲು ಧಾರ್ಮಿಕ ಭಾವನೆಗಳನ್ನು ದಾಳಗಳಾಗಿ ಬಳಸುತ್ತಿದ್ದಾರೆ.

ಹಬ್ಬ ಹರಿದಿನಗಳು ಪೋಲಿಸರಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿವೆ. ಸಂತೊಷದಿಂದ ಆಚರಿಸಬೇಕಾದ, ವ್ಯಕ್ತಿಯ ಆತ್ಮೋನ್ನತಿಗೆ ಸಾಧನವಾಗಬೇಕಾಗಿದ್ದ ಹಬ್ಬಗಳು ಇಂದು ರಣರಂಗಗಳಾಗಿ, ಬೀದಿ ಕಾಳಗಗಳಾಗಿ ಪರಿವರ್ತನೆಗೊಂಡಿರುವುದು ಎಂಥ ನಾಚಿಕೆಗೇಡು! ಹಬ್ಬಗಳು ಭಗವಂತನಿಗೆ ಹೃದಯದಾಳದ ಭಕ್ತಿಯ ನಿವೇದನೆಯ ಸಂದರ್ಭಗಳಾಗುವ ಬದಲು ಅಂಧಾಭಿಮಾನಿಗಳು ಅನ್ಯ ಧರ್ಮೀಯರ ಮೇಲೆ ದ್ವೇಷದ ವಿಷಕಾರುವ ಸಂದರ್ಭಗಳಾಗಿವೆ. ಧಾರ್ಮಿಕ ಆಚರಣೆಗಳು ಅತ್ಯಂತ ಖಾಸಗಿಯಾದವು, ನಮ್ಮೊಳಗಿನ ಅಹಂಕಾರವನ್ನು ಕೊಂದು ಆತ್ಮೋನ್ನತಿ ಮಾಡಿಕೊಳ್ಳಲು ಅವುಗಳ ಸದ್ಬಳಕೆಯಾಗಬೇಕು. ಮನುಷ್ಯನಿಗೆ ಐಹಿಕ ಮತ್ತು ಪಾರಲೌಕಿಕ ಬದುಕಿನಲ್ಲಿ ಶಾಂತಿಯನ್ನು ದೊರಕಿಸುವ ಉದ್ದೇಶದಿಂದಲೇ ಎಲ್ಲಾ ಧರ್ಮಗಳ ಸ್ಥಾಪನೆಯಾಗಿರುವುದು. ಆದರೆ ವಾಸ್ತವವಾಗಿ ಧರ್ಮಗಳು ಸಂಘರ್ಷದ ಮೂಲಗಳಾಗಿವೆ, ಈ ಪ್ರಪಂಚದ ಎಲ್ಲ ತಲ್ಲಣಗಳಿಗೆ ಕಾರಣವಾಗಿವೆ. ಧರ್ಮಗಳು ಮತ್ತು ಧಾರ್ಮಿಕ ಕೇಂದ್ರಗಳು ಪತ್ರಿಕೆಗಳಲ್ಲಿ ಬರುವ ವಾಣಿಜ್ಯ ವಸ್ತುಗಳ ಜಾಹೀರಾತುಗಳಂತಾಗಬಾರದು, ತಮ್ಮ ಸರಕುಗಳನ್ನು ಜನಪ್ರಿಯಗೊಳಿಸುವ ಸ್ಪರ್ಧೆಗೆ ಹೊರಟಿರುವ ವ್ಯಾಪಾರಿ ಕಂಪನಿಗಳಂತಾಗಬಾರದು!

ಧರ್ಮಗಳಿರುವುದೇ ಮನುಷ್ಯನ ದೌರ್ಬಲ್ಯಗಳನ್ನು ದೂರಮಾಡುವುದಕ್ಕೆ. ಆದರೆ ವ್ಯಂಗ್ಯವೆಂದರೆ ಧರ್ಮಗಳೇ ಇಂದು ಮನುಷ್ಯನ ದೊಡ್ಡ ದೌರ್ಬಲ್ಯಗಳಾಗಿವೆ. ಧಾರ್ಮಿಕತೆಯೆಂದರೆ ಕೇವಲ ದೇವಾಲಯಕ್ಕೋ ಚರ್ಚಿಗೋ ಮಸೀದಿಗೋ ಹೋಗುವುದಲ್ಲ. ಎಲ್ಲಾ ದೇಶಗಳಲ್ಲೂ ಯುವ ಪೀಳಿಗೆ ಇಂದು ಈ ಪವಿತ್ರ ಸ್ಥಳಗಳ ಕಡೆ ಬೆನ್ನು ತಿರುಗಿಸಿದೆ, ಧಾರ್ಮಿಕ ವಿಧಿ ವಿಧಾನಗಳ ಬಗ್ಗೆ ಅಸಡ್ಡೆಯ ಮನೋಭಾವವನ್ನು ತೋರಿಸುತ್ತಿದೆ. ಅಂಥವರಿಗೆ ನಾಸ್ತಿಕರು ಎಂಬ ಹಣೆಪಟ್ಟಿಯನ್ನು ಹಚ್ಚಲಾಗುತ್ತಿದೆ. ಆದರೆ ನಾವು ಗಮನಿಸಿದ ಹಾಗೆ ನಿತ್ಯವೂ ಪೂಜಾಸ್ಥಳಗಳಿಗೆ ಹೋಗುವ ಶ್ರದ್ಧಾಳು ಭಕ್ತರಿಗಿಂತಲೂ ಈ ಯುವಕರಲ್ಲಿ ಅನೇಕರು ಹೆಚ್ಚು ಧಾರ್ಮಿಕತೆ ಉಳ್ಳವರಾಗಿದ್ದಾರೆ. ತಪ್ಪು ಮಾಡಿದಾಗ ಒಳಗೊಳಗೇ ಅಪರಾಧಿ ಪ್ರಜ್ಞೆಯಿಂದ ಬಳಲುವ ಮನೋಭಾವವನ್ನು ಈ ಯುವಕರು ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ. ಇದಕ್ಕೆ ತದ್ವಿರುದ್ಧವಾಗಿ ಧರ್ಮನಿಷ್ಠರೆಂದು ಕಾಣಿಸಿಕೊಳ್ಳುವ ಅನೇಕರು ಧರ್ಮದ ಉನ್ನತ ತತ್ವಗಳಿಗೆ ಕಿಂಚಿತ್ತೂ ಬೆಲೆಕೊಡುವುದಿಲ್ಲ; ಅಷ್ಟೇ ಅಲ್ಲ, ಧರ್ಮವಿರುದ್ಧವಾದ ಕೆಲಸ ಮಾಡಲೂ ಹಿಂಜರಿಯುವುದಿಲ್ಲ. ಅವರ ಪೂಜಾವಿಧಿಗಳೆಲ್ಲವೂ ಕೇವಲ ಯಾಂತ್ರಿಕವಾಗಿದ್ದು ಪೂಜಾಕೋಣೆಗೆ ಮಾತ್ರ ಸೀಮಿತವಾಗಿವೆ. ಪೂಜಾಕೋಣೆಯಿಂದ ಹೊರಬರುವುದೇ ತಡ, ಧರ್ಮವಿರೋಧಿ ಕೆಲಸಗಳಲ್ಲಿ ಎಗ್ಗಿಲ್ಲದೆ ತೊಡಗುತ್ತಾರೆ. ಭೌತಿಕ ಸುಖ ಸಂಪತ್ತುಗಳಿಗೆ ಅವರು ಹೆಚ್ಚು ಹಾತೊರೆಯುತ್ತಾರೆಯೇ ಹೊರತು ನೈತಿಕ ಮೌಲ್ಯಗಳಿಗಲ್ಲ! ಹಾಗಾಗಿ ಅವರು ಧರಿಸುವ ಧಾರ್ಮಿಕ ಲಾಂಛನಗಳು ವಯಸ್ಸಾದ ಮಹಿಳೆಯು ಧರಿಸಿದ ಆಡಂಬರದ ವಸ್ತ್ರಾಭರಣಗಳಂತೆ ಕಾಣಿಸುತ್ತವೆ. ಹಿಂದಿಯಲ್ಲಿರುವ ಈ ಮುಂದಿನ ನಾಣ್ಣುಡಿ ಅಂಥವರನ್ನು ಕಂಡೇ ಹೇಳಿದಂತಿದೆ: "ಬೂಢೀ ಗೋಢೀ ಲಾಲ್ ಲಗಾಮ್!" (ವಯಸ್ಸಾದ ಕುದುರೆಗೆ ಕೆಂಪು ಲಗಾಮು ಏಕೆ?)

ಧರ್ಮದ ಮೂಲ ಗುರಿ ಮನುಷ್ಯನನ್ನು ಇಹ ಮತ್ತು ಪರದ ಬದುಕಿನಲ್ಲಿ ಸುಖವಾಗಿ ಇರುವಂತೆ ಮಾಡುವುದು. **"ಯಥೋಽಭ್ಯುದಯ-ನಿಶ್ರೇಯಸ ಸಿದ್ಧಿಃ ಸ ಧರ್ಮಃ"** ಎನ್ನುತ್ತದೆ ವೈಶೇಷಿಕ ಸೂತ್ರ. ಇಹದ ಅಭ್ಯುದಯ ಪರದ ನಿಃಶ್ರೇಯಸ್ಸನ್ನು ಹಾರೈಸುವುದೇ ಧರ್ಮ. ಜಗತ್ತಿನ ಜನರಲ್ಲಿ ಪರಸ್ಪರ ಸೌಹಾರ್ದ, ಶಾಂತಿಯುತ ಸಹಬಾಳ್ವೆ ಮತ್ತು ಮಾನವೀಯತೆ ಇರಬೇಕೆಂದು ಧರ್ಮಗಳು ಸಾರುತ್ತವೆ. ತಮ್ಮ ಅನುಯಾಯಿಗಳಿಗೆ ಹಿಂಸೆಯನ್ನು ಭೋಧಿಸುವ ಧರ್ಮ ಯಾವುದೂ ಇಲ್ಲ. ಪ್ರತಿಯೊಂದು ದೇಶಕ್ಕೂ ತನ್ನದೇ ಆದ ಭೌಗೋಳಿಕ ಗಡಿಬಾಂದುಗಳಿರುತ್ತವೆ. ವಿಭಿನ್ನ ದೇಶಗಳ ಅಸ್ತಿತ್ವಕ್ಕೆ ಕಾರಣವಾಗಿರುವ ಈ ರಾಜಕೀಯ ಗಡಿಗಳಷ್ಟೇ ಅಲ್ಲದೆ ಜನರು ಧರ್ಮ, ಜಾತಿ, ಭಾಷೆ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ತಮ್ಮದೇ ಆದ ಅಗೋಚರ ಗಡಿಬಾಂದುಗಳನ್ನು

ನಿರ್ಮಿಸಿಕೊಂಡಿದ್ದಾರೆ. ರಾಜಕೀಯ ಗಡಿಗಳಿಗಿಂತ (political borders) ಈ ಅಗೋಚರ ಧಾರ್ಮಿಕ ಗಡಿಗಳು (communal borders) ಒಂದು ರೀತಿಯಲ್ಲಿ ಹೆಚ್ಚು ಬಲಿಷ್ಠವಾಗಿವೆ. ರಾಜಕೀಯ ಗಡಿಗಳು ಕಾಲ ಕಾಲಕ್ಕೆ ಬದಲಾಗಬಹುದು, ಆದರೆ ಈ ಮಾನಸಿಕ ಗಡಿಗಳು, ಅದರಲ್ಲೂ ವಿಶೇಷವಾಗಿ ಧರ್ಮಾಧಾರಿತ ಗಡಿಗಳು ಎಂದಿಗೂ ಬದಲಾಗುವುದಿಲ್ಲ; ಅಷ್ಟೇ ಅಲ್ಲ ಅವು ದಿನದಿಂದ ದಿನಕ್ಕೆ ಬಲಿಷ್ಠಗೊಳ್ಳುತ್ತಿರುವುದನ್ನು ನಾವು ಕಾಣಬಹುದು.

ನೀವು ಯಾವುದೇ ಆಟವನ್ನು ನೋಡುತ್ತಾ ನಿಮ್ಮ ತಂಡಕ್ಕೆ ಪ್ರೋತ್ಸಾಹ ಕೊಡುವುದು ಸರಿಯೇ. ಆದರೆ ನಿಮ್ಮ ತಂಡ ಸೋತರೆ, ಹಿಂಸಾಚಾರಕ್ಕೆ ಇಳಿದು ಕಲ್ಲು, ಕೊಳೆತ ಮೊಟ್ಟೆ, ಹ್ಯಾಂಡ್ ಗ್ರೆನೇಡ್ ಇತ್ಯಾದಿಗಳನ್ನು ಎಸೆದರೆ ಆಗ ಆ ಆಟ ಆಟವಾಗಿ ಉಳಿಯದೆ ಅಪರಾಧವಾಗಿ ಪರಿಣಮಿಸುತ್ತದೆ. ಇದೇ ರೀತಿ ಯಾವುದೇ ಧರ್ಮೀಯರು ಉನ್ನತ ಧಾರ್ಮಿಕ ತತ್ವಗಳಿಗೆ ಅಪಾಯ ತರುವ ಧರ್ಮಬಾಹಿರ ಚಟುವಟಿಕೆಗಳಲ್ಲಿ ತೊಡಗಿದರೆ ಧರ್ಮಗಳು ತಮ್ಮ ನೈಜಾರ್ಥವನ್ನು ಕಳೆದುಕೊಂಡು ವಿರೂಪಗೊಳ್ಳುತ್ತವೆ. ಜಗತ್ತಿನ ಎಲ್ಲ ಧರ್ಮಗಳು ಒಂದು ಸುಂದರವಾದ ಉದ್ಯಾನವನದಲ್ಲಿರುವ ವಿಭಿನ್ನ ಹೂಗಳಿದ್ದಂತೆ. ಪ್ರತಿಯೊಂದು ಹೂವಿಗೂ ತನ್ನದೇ ಆದ ಚೆಲುವು ಇರುತ್ತದೆ. ಎಲ್ಲ ಹೂಗಳ ಸಮಷ್ಟಿ ಸೌಂದರ್ಯವೇ ಉದ್ಯಾನವನದ ಸೌಂದರ್ಯ. ಒಬ್ಬರಿಗೆ ಪ್ರಿಯವಾದ ಹೂವು ಮತ್ತೊಬ್ಬರಿಗೆ ಪ್ರಿಯವಾಗಿರಬೇಕೆಂದೇನೂ ಇಲ್ಲ, ಅದು ಅವರವರ ಮನಸ್ಸಿನಲ್ಲಿರುವ ವ್ಯಕ್ತಿಗತ ಸೌಂದರ್ಯಪ್ರಜ್ಞೆ, ಅದನ್ನರಿತು ಜೀವನವೆಂಬ ಉದ್ಯಾನವನದಲ್ಲಿ ವಿಹರಿಸಿ ಆನಂದಿಸುವುದೇ ಎಲ್ಲ ಧರ್ಮಗಳ ಮೂಲ ಆಶಯ.

**'ದೇವನೊಬ್ಬ ನಾಮ ಹಲವು'**
**ಸತ್ಯವೊಂದೆ ದಾರಿ ಹಲವು**
**ಅನುಭಾವವೊಂದೇ ಧರ್ಮ ಹಲವು**
**ಮನುಕುಲವೊಂದೆ ಮನುಜರು ಹಲವರು**

**ಸುಮಧುರ ಸುಮಗಳಂತೆ ಜಗದ ಧರ್ಮಗಳು**
**ಇದೆಯಲ್ಲವೇ ಪ್ರತಿ ಹೂವಿಗೂ ತನ್ನದೇ ಚೆಲುವು?**
**ಸವಿಯಿರಿ ನಿಮ್ಮೊಲುಮೆಯ ಹೂವಿನ ಚೆಲುವ**
**ಸವಿಯುತ ಉದ್ಯಾನವನದ ಸಮಷ್ಟಿ ಚೆಲುವ.**

**ಸಂಪಿಗೆಯೋ, ಸೇವಂತಿಗೆಯೋ,**
**ಮಲ್ಲಿಗೆಯೋ, ಗುಲಾಬಿಯೋ**
**ಯಾವ ಹೂವಾದರೇನಂತೆ**
**ಹರಡಲಿ ಜಗಕೆಲ್ಲ ಅವುಗಳ ಸುಗಂಧ**
**ತೊಲಗಲಿ ಕೋಮುವೈಷಮ್ಯಗಳ ದುರ್ಗಂಧ!**

27.10.2010

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑